## ॥ ಪವಮಾನ ಪವಮಾನ ॥

ಪವಮಾನ ಪವಮಾನ ಜಗದ ಪ್ರಾಣ
ಸಂಕರುಷಣ ಭವ ಭಯಾರಣ್ಯ ದಹನ । ಪ ।

ಶ್ರವಣವೆ ಮೊದಲಾದ ನವವಿಧ ಭಕುತಿಯ
ತವಕದಿಂದಲಿ ಕೊಡು ಕವಿಜನಪ್ರಿಯಾ । ಅಪ ।

ಹೇಮ ಕಚ್ಚೂಟ ಉಪವೀತ ಧರಿತ ಮಾರುತ
ಕಾಮಾದಿವರ್ಗರಹಿತಾ ವ್ಯೋಮಾದಿ ಸಕಲ ವ್ಯಾವೃತಾ ನಿರ್ಭೀತಾ
ರಾಮಚಂದ್ರನ ನಿಜದೂತ ಯಾಮ ಯಾಮಕೆ ನಿನಾರಧಿಪುದಕೆ
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ ಈ ಮನಸಿಗೆ ಸುಖಸ್ತೋಮವ
ತೋರುತ ಪಾಮರಮತಿಯನು ನೀಮಾಣಿಪುದೋ ॥ ೧ ॥

ವಜ್ರ ಶರೀರ ಗಂಭೀರ ಮುಕುಟಧರ ದುರ್ಜನವನಕುಠಾರ
ನಿರ್ಜರಮಣಿ ದಯಾ ಪಾರಾವಾರಾ ಉದಾರ ಸಜ್ಜನರಘಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ಮೂರ್ಜಗವರಿವಂತೆ
ಗರ್ಜನೆ ಮಾಡಿದಿ ಹೆಜ್ಜೆ ಹೆಜ್ಜೆಗೆ ನಿನ್ ಅಬ್ಜ ಪಾದದೊಳಿ
ಮೂರ್ಜಗದಲಿ
ಭವವರ್ಜಿತ ನೆನಿಸೋ ॥ ೨ ॥

ಪ್ರಾಣ ಅಪಾನ ವ್ಯಾನ ಉದಾನ ಸಮಾನ ಆನಂದ ಭಾರತಿ ರಮಣ
ನೀನೆ ಶರ್ವಾದಿಗೀರ್ವಾಣಾದ್ಯರಿಗೆ ಜ್ಞಾನಧನಪಾಲಿಪ ವರೇಣ್ಯ
ನಾನು ನಿರುತದಲಿ ಏನೇನೆಸಗುವೆ ಮಾನಸಾದಿ ಕರ್ಮ
ನಿನಗೊಪ್ಪಿಸಿದೆನೋ ಪ್ರಾಣನಾಥ ಸಿರಿವಿಜಯವಿಠಲನ
ಕಾಣಿಸಿಕೊಡುವುದು ಭಾನುಪ್ರಕಾಶ ॥ ೩ ॥